ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ 20ನೇ ಏಪ್ರಿಲ್ 1998 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.20 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀ ಚಂದ್ರಶೇಖರ ಮಾಮನಿ) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಕಟಣೆ

ಉಪಾಧ್ಯಕ್ಷರು : ದಿನಾಂಕ 20.4.1998ರಂದು ವಿಧಾನ ಸಭೆಯ ಸದಸ್ಯರು ಮತ್ತು ಭಾರತೀಯ ಜನತಾ ಪಕ್ಷದ ಅಧ್ಯಕ್ಷರೂ ಆಗಿರುವ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪತ್ರ ಬರೆದಿದ್ದು ಅದರಲ್ಲಿ ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರನ್ನು ವಿಧಾನ ಸಭೆಯಲ್ಲಿ ಬಿ.ಜೆ.ಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದ್ದೇವೆಂದು ತಿಳಿಸಿರುತ್ತಾರೆ. ಆದಕಾರಣ ಶ್ರೀ ಕೆ.ಎಸ್. ಈಶ್ವರಪ್ಪನವರನ್ನು ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರೆಂದು ಪರಿಗಣಿಸುತ್ತೇನೆ. ಈಗ ಬೇಡಿಕೆಗಳ ಮೇಲೆ ಚರ್ಚೆ ಶ್ರೀ ಡಿ.ಆರ್.ಪಾಟೀಲ್‌ರವರು ಮಾತನಾಡಬೇಕು.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಕಾವೇರಿ ನೀರಿನ 4ನೇ ಹಂತದ ಕೆಲಸಕ್ಕಾಗಿ ಓ.ಇ.ಸಿ.ಎಫ್ ನವರು ಕರ್ನಾಟಕಕ್ಕೆ ಹಣವನ್ನು ಬಿಡುಗಡೆ ಮಾಡಬಾರದೆಂದು ತಮಿಳುನಾಡು ಸರ್ಕಾರದವರು ಪತ್ರ ಬರೆದಿದ್ದಾರೆ. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿಯಿದೆ. ನಾನು ತಮ್ಮ ಮೂಲಕ ಇದರ ಚರ್ಚೆಗೆ ಅವಕಾಶ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಮೊದಲು ಬೇಡಿಕೆಗಳ ಮೇಲೆ ಚರ್ಚೆ ತೆಗೆದುಕೊಳ್ಳೋಣ. ಶ್ರೀ ಡಿ.ಆರ್. ಪಾಟೀಲ್‌ರವರು ಮಾತನಾಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಮಂಗಳೂರಿನಲ್ಲಿ ಜನ ಸಾಮಾನ್ಯರ ಪರವಾಗಿ ಸೇವೆಯನ್ನು ಮಾಡುವ ಮೂರು ಶಾಸಕರ ಮೇಲೆ ಅಲ್ಲಿನ ಜಿಲ್ಲಾಧಿಕಾರಿಗಳು ಕೇಸ್ ಹಾಕಿರುವುದರ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಬಿ.ಜೆ.ಪಿ. ಶಾಸಕರುಗಳಾದ ನಾವೆಲ್ಲರೂ ಈಗ ಆಗಿರುವ ಅಪಮಾನವನ್ನು ಸಹಿಸಿಕೊಂಡು ಸುಮ್ಮನೇ ಕೂರುವುದಕ್ಕೆ ಆಗುವುದಿಲ್ಲ. ಬಹಳ ಗಂಭೀರವಾದ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈಗ ಏನು ರೂಲ್ಸ್ ಇದೆ ಅದನ್ನು